ಕರ್ನಾಟಕ ವಿಧಾನಸಭೆ
(13ನೇ ವಿಧಾನ ಸಭೆ. 2ನೇ ಅಧಿವೇಶನ)

283 ಶ್ರೀ ಗೋಪಾಲ ಭಂಡಾರಿ ಹೆಚ್. (ಕಾರ್ಕಳ)

ಮಾನ್ಯ ವಸತಿ ಹಾಗೂ ಮುಜರಾಯಿ ಸಚಿವರು.

ಅ). ರಾಜೀವ್ ಗಾಂಧಿ ವಸತಿ ನಿಗಮದಿಂದ ಮಂಜೂರಾದ ಆಶ್ರಯ, ಅಂಬೇಡ್ಕರ್, ಇಂದಿರಾ ಆವಾಸ್ ಮನೆಗಳ ಅನುಷ್ಠಾನದಲ್ಲಿ ಫಲಾನುಭವಿಗಳಿಗೆ ನೋಂದಾವಣೆ ಅಗತ್ಯವಿದೆಯೇ;

ಹೌದು.

ಆ). ಸಾಲದ ಮೊತ್ತ ಮಂಜೂರಾತಿ ಇಲ್ಲದ ಮನೆಗಳಿಗೆ ನೋಂದಾವಣೆ ಅನಗತ್ಯವಲ್ಲವೇ;

ಫಲಾನುಭವಿಗಳು ಮಂಜೂರಾದ ಮನೆಯನ್ನು ಯಾವುದೇ ಕಾರಣಕ್ಕೂ ಪರಭಾರೆ/ಬಾಡಿಗೆ/ಭೋಗ್ಯ/ಮಾರಾಟ ಮಾಡುವುದರ ಮೂಲಕ ಮತ್ತೆ ವಸತಿರಹಿತರಾಗಬಾರದೆಂಬ ಹಾಗೂ ಒಮ್ಮೆ ವಸತಿ ಸೌಕರ್ಯ ಪಡೆದವರೇ ಮತ್ತೆ ಪಡೆಯಬಾರದೆಂಬ ಹಿತದೃಷ್ಟಿಯಿಂದ ನೋಂದಾವಣೆಯನ್ನು ಕಡ್ಡಾಯ ಮಾಡಲಾಗಿದೆ.

ಇ). ಪ್ರತಿ ಹಂತದಲ್ಲಿ ;ಪಂಚಾಯತ್ ಕಾರ್ಯದರ್ಶಿಯೊಡನೆ ಫಲಾನುಭವಿಗಳು ಮನೆಯ ಮುಂದೆ ಫೋಟೊ ತೆಗೆಯಿಸುವ ಅಗತ್ಯವೇನು;

ಫಲಾನುಭವಿಗಳು, ಮನೆಗಳನ್ನು ನಿರ್ಮಿಸಿಕೊಳ್ಳದಿದ್ದರೂ ಅನುದಾನವನ್ನು ಪಡೆದುಕೊಳ್ಳುವುದು, ಹಳೇ ಮನೆ ತೋರಿಸಿ ಹಣವನ್ನು ಪಡೆದುಕೊಳ್ಳುವುದು, ಅನುದಾನವನ್ನು ಮನೆ ನಿರ್ಮಿಸಿಕೊಳ್ಳುವುದರ ಬದಲು ಇತರೆ ಕೆಲಸಗಳಿಗಾಗಿ ಉಪಯೋಗಿಸಿಕೊಳ್ಳುವುದು, ಬೇರೆಯವರ ಮನೆ ಮುಂದೆ ಫಲಾನುಭವಿಯು ಫೋಟೋ ತೆಗೆಸಿ ನೀಡುವುದು, ಕಂಪ್ಯೂಟರ್‌ನಲ್ಲಿ ಡಿಜಿಟಲ್ ಮಿಕ್ಸಿಂಗ್ ಮಾಡಿ, ಛಾಯಾಚಿತ್ರಗಳನ್ನು ನೀಡಿ ಅನುದಾನವನ್ನು ಪಡೆದುಕೊಳ್ಳುವುದು ಮುಂತಾದ ರೀತಿಯಲ್ಲಿ ಯೋಜನೆಯ ಅನುದಾನದ ದುರುಪಯೋಗ ತಡೆಯಲು ಈ ಕ್ರಮದ ಅಗತ್ಯವಿರುತ್ತದೆ.

ಈ). ಪುರಸಭೆಯ ವ್ಯಾಪ್ತಿಯಲ್ಲಿ ಅಂಬೇಡ್ಕರ್ –ಆಶ್ರಯ ಮನೆಗಳನ್ನು ಏಕೆ ವಿತರಿಸುತ್ತಿಲ್ಲ?

ಮನೆಗಳ ನಿರ್ಮಾಣದ ಗುರಿಯನ್ನು ನಿಗದಿ ಪಡಿಸಿರುವುದಿಲ್ಲವಾದ್ದರಿಂದ ಈ ಮನೆಗಳನ್ನು ವಿತರಿಸುತ್ತಿಲ್ಲ.

ಸಂಖ್ಯೆ: ವಇ 27 ಹೆಚ್ ಎಎಂ 2009

(ಮಾಲೂರು ಎಸ್.ಎನ್.ಕೃಷ್ಣಯ್ಯ ಶೆಟ್ಟಿ)
ವಸತಿ ಹಾಗೂ ಮುಜರಾಯಿ ಸಚಿವರು.

ಕರ್ನಾಟಕ ವಿಧಾನ ಸಭೆ

284 ಶ್ರೀ ಗೋಪಾಲ ಭಂಡಾರಿ ಹೆಚ್

ಉನ್ನತ ಶಿಕ್ಷಣ ಸಚಿವರು

ಅ). ಕಾರ್ಕಳ ತಾಲ್ಲೂಕಿನ ಹೆಬ್ರಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು ಕಾರ್ಕಳದಲ್ಲಿರುವ ಕಾಲೇಜಿನಲ್ಲಿ ಈ ಶೈಕ್ಷಣಿಕ ವರ್ಷ ಪ್ರಾರಂಭದಂದಿನಿಂದ ಯಾವ ಯಾವ ಹೆಸರಿನ ಉಪನ್ಯಾಸಕರನ್ನು ಯಾವ ದಿನಾಂಕದಲ್ಲಿ ವರ್ಗಾಯಿಸಲಾಗಿದೆ;

ಈ ಶೈಕ್ಷಣಿಕ ವರ್ಷದ ವರ್ಗಾವಣೆಯಲ್ಲಿ ಹೆಬ್ರಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಿಂದ 05 ಉಪನ್ಯಾಸಕರುಗಳನ್ನು ವರ್ಗಾವಣೆ ಮಾಡಲಾಗಿದೆ. ಹಾಗೂ ಕಾರ್ಕಳ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಿಂದ ಉಪನ್ಯಾಸಕರ್ಯಾರನ್ನು ವರ್ಗಾವಣೆ ಮಾಡಿರುವುದಿಲ್ಲ. ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ). ಆ ಕಾಲೇಜುಗಳಲ್ಲಿ ಹಾಲಿ ಖಾರ್ಯನಿರ್ವಹಿಸುತ್ತಿರುವ ಪೂರ್ಣಕಾಲಿಕ ಉಪನ್ಯಾಸಕರ ಹುದ್ದೆ ಎಷ್ಟೆಷ್ಟು; ತೆರವಾಗಿರುವ ಹುದ್ದೆಗಳೆಷ್ಟು;

: ಹೆಬ್ರಿ ಸರ್ಕಾರಿ ಪ್ರಥಮ ದರ್ಜೆ ಕಾಲೆಜು:–

ಮಂಜೂರಾದ ಹುದ್ದೆಗಳು .	10
ಕರ್ತವ್ಯ ನಿರ್ವಹಿಸುತ್ತಿರುವ ಉಪನ್ಯಾಸಕರ ಸಂಖ್ಯೆ:	04
ಖಾಲಿ ಇರುವ ಹುದ್ದೆಗಳ ಸಂಖ್ಯೆ:	06

ಕಾರ್ಕಳ ಸರ್ಕಾರಿ ಪ್ರಥಮ ದರ್ಜೆ ಕಾಲೇಜು:

ಮಂಜೂರಾದ ಹುದ್ದೆಗಳು	05
ಕರ್ತವ್ಯ ನಿರ್ವಹಿಸುತ್ತಿರುವ ಉಪನ್ಯಾಸಕರ ಸಂಖ್ಯೆ:	05

ಖಾಲಿ ಇರುವ ಹುದ್ದೆಗಳಿರುವುದಿಲ್ಲ.

ಇ). ವರ್ಷದ ಮಧ್ಯದಲ್ಲಿ ವರ್ಗಾವಣೆ ಮಾಡಿದಾಗ ಅಲ್ಲಿಗೆ ಉಪನ್ಯಾಸಕರನ್ನು ಕೊಡದಿರಲು ಕಾರಣವೇನು; ಯಾವಾಗ ಭರ್ತಿ ಮಾಡಲಾಗುವುದು?